**ಸಹಜವಾಗಿಯೇ ನಿಮ್ಮ ಮೇಲಿನ ನಿರೀಕ್ಷೆಯನ್ನೂ ಹೆಚ್ಚಿಸುತ್ತದೆ. ಈ ನಿರೀಕ್ಷೆ ನಿಮಗೆ ಭಾರ ಎನಿಸಿದ್ದಿದೆಯೇ? ಈ ಭಾರ ಇಲ್ಲದೆ ಸಾಮಾನ್ಯ ಕುಟುಂಬದಿಂದ ಬಂದಿದ್ದರೆ ಚೆನ್ನಾಗಿತ್ತು ಅನಿಸಿದ್ದಿದೆಯೇ?**

ನಾನು ಯಾವಾಗಲೂ ನೀವು ಹೇಳಿದ ಹಾಗೆ ಜನಪ್ರಿಯ ನಟರ ನಡುವಲ್ಲಿಯೇ ಬೆಳೆದಿದ್ದು. ಹಾಗಾಗಿ ಇವೆಲ್ಲವೂ ಇಲ್ಲದಿದ್ದರೆ ಹೇಗಿರುತ್ತಿತ್ತು ಎಂದು ಗೊತ್ತಿಲ್ಲ; ಆ ಕುರಿತು ಯೋಚನೆಯನ್ನೂ ಮಾಡಿಲ್ಲ. ಎಲ್ಲದರಲ್ಲಿಯೂ ಒಂದು ಅಡ್ವಾಂಟೇಜ್ ಮತ್ತೆ ಡಿಸ್‌ಅಡ್ವಾಂಟೇಜ್ ಎರಡೂ ಇದ್ದೇ ಇರುತ್ತದೆ. ಚಿಕ್ಕವಯಸ್ಸಿನಿಂದಲೂ ನನ್ನನ್ನು ಜನರು ತುಂಬ ಪ್ರೀತಿಯಿಂದ ನೋಡುತ್ತಲೇ ಬಂದಿದ್ದರು. ಹಾಗಾಗಿ ನನ್ನ ಸಿನಿಮಾಗಳ ಕುರಿತು ಅವರ ನಿರೀಕ್ಷೆಯೂ ಹೆಚ್ಚೇ ಇತ್ತು. ಇದು ಡಿಸ್‌ಅಡ್ವಾಂಟೇಜ್ ಅಂತೇನೂ ಅನಿಸಿಲ್ಲ. ಸಿನಿಮಾ ಚೆನ್ನಾಗಿದ್ದು, ಒಳ್ಳೆಯ ಪ್ರತಿಭೆ ಇದ್ದರೆ, ಸಾಮಾನ್ಯ ಕುಟುಂಬದಿಂದಲೇ ಬರಲಿ, ಸೆಲೆಬ್ರಿಟಿ ಕುಟುಂಬದಿಂದಲೇ ಬರಲಿ ಸಿನಿಮಾ ಗೆಲ್ಲುತ್ತದೆ. ನಟ ಉಳಿದುಕೊಳ್ಳುತ್ತಾನೆ.

◆ **ಕಲಾವಿದನಾಗಿ ನಿಮ್ಮ ಕುಟುಂಬದಿಂದ ಕಲಿತಿರುವುದು ಏನು?**

ಶಿಸ್ತು. ಹಾಗೆಯೇ ನಮಗೆ ನಿಜವಾಗಿಯೂ ಪ್ಯಾಷನ್ ಇರುವ ಕೆಲಸವನ್ನೇ ಮಾಡಬೇಕು ಎಂಬುದನ್ನೂ ನಾನು ಮನೆಯಿಂದಲೇ ಕಲಿತಿದ್ದು. ನಾವು ಚಿಕ್ಕವಯಸ್ಸಿನಿಂದಲೂ ನೋಡಿದ್ದು, ಕೇಳಿದ್ದೆಲ್ಲ ಸಿನಿಮಾವನ್ನೇ. ಬಿಡುವಿದ್ದಾಗಲೂ ಅಷ್ಟೆ, ತಾತ, ಅಪ್ಪ, ಚಿಕ್ಕಪ್ಪ, ದೊಡ್ಡಪ್ಪ ಯಾರದಾದರೂ ಸಿನಿಮಾ ಶೂಟಿಂಗ್ ಹೋಗ್ತಿದ್ವಿ. ಜಾಸ್ತಿ ಸಮಯ ಕಳೆದಿದ್ದೆಲ್ಲ ಸೆಟ್‌ಗಳಲ್ಲಿಯೇ. ಹಾಗಾಗಿ ಸಿನಿಮಾ ಬಗ್ಗೆ ಗೊತ್ತಿರುವಷ್ಟು ಬೇರೆ ಯಾವುದರ ಬಗ್ಗೆಯೂ ಗೊತ್ತಿಲ್ಲ.

◆ **ನಿಮ್ಮ ದೃಷ್ಟಿಯಲ್ಲಿ ನಟನೆ ಎಂದರೆ ಏನು? ಅದನ್ನು ಹೇಗೆ ವ್ಯಾಖ್ಯಾನಿಸ್ತೀರಿ?**

ನಟನೆಗೆ ಹೀಗೆ ಎಂದು ಒಂದು ಡೆಫಿನೆಷನ್ ಕೊಡುವುದು ಕಷ್ಟ. ಅದು ಒಬ್ಬೊಬ್ಬರ ಪಾಲಿಗೆ ಒಂದೊಂದು ರೀತಿ ಇರುತ್ತದೆ. ಒಂದೊಂದು ಕತೆ, ಒಂದೊಂದು ಪಾತ್ರಕ್ಕೂ ಅದು ಬದಲಾಗುತ್ತ ಹೋಗುತ್ತದೆ. ಕೆಲವೊಂದು ಪಾತ್ರದಲ್ಲಿ ನಾವು ನಾವಾಗಿಯೇ ಇರಬಹುದು. ಯಾಕೆಂದರೆ ನಮ್ಮ ಗುಣಗಳಿಗೂ ಆ ಪಾತ್ರಕ್ಕೂ ತುಂಬ ಹೋಲಿಕೆ ಇರುತ್ತದೆ. ಇನ್ನು ಕೆಲವು ಪಾತ್ರಗಳು ನಮ್ಮ ಗುಣಗಳು, ವರ್ತನೆಗಿಂತ ಬೇರೆ ರೀತಿಯೇ ಆಗಿರುತ್ತವೆ. ನಾವೂ ಬೇರೆಯೇ ರೀತಿ ಆ ಪಾತ್ರದಲ್ಲಿ ತೊಡಗಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ, ನಟನೆ ಎಂದರೆ ನನ್ನ ಪಾಲಿಗೆ ಕಲಿಯುವಿಕೆ. ಕಲಿತು ಮುಗಿಯಿತು ಎನ್ನುವ ಹಾಗೆ ಇಲ್ಲವೇ ಇಲ್ಲ. ಪ್ರತಿ ಪಾತ್ರದಲ್ಲಿಯೂ, ಪ್ರತಿ ನಿರ್ದೇಶಕನ ಬಳಿಯೂ ಕಲಿಯುವುದು ಇದ್ದೇ ಇರುತ್ತದೆ. ಹಾಗಾಗಿ ನಟನೆ ಎನ್ನುವುದು ನಿರಂತರ ಕಲಿಕೆ.

◆ **'10' ಸಿನಿಮಾದಲ್ಲಿ ಬಾಕ್ಸರ್ ಆಗಿ ಕಾಣಿಸಿಕೊಳ್ಳುತ್ತಿದ್ದೀರಿ. ಆ ಸಿನಿಮಾ ಬಗ್ಗೆ ಹೇಳಿ.**

ಇದು ಪೂರ್ತಿಯಾಗಿ ಬಾಕ್ಸಿಂಗ್ ಸ್ಪೋರ್ಟ್ಸ್ ಸಿನಿಮಾ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಎಮೋಷನಲ್ ಡ್ರಾಮಾ ಇದೆ. ಮನರಂಜನೆ ಇದೆ. ಎಲ್ಲರೂ ಒಬ್ಬ ಕ್ರೀಡಾಪಟುವನ್ನು ಕ್ರೀಡಾಂಗಣದಲ್ಲಿ ಮಾತ್ರ ನೋಡುತ್ತಿರುತ್ತೇವೆ. ಅವನ ಆಟ, ಗೆಲುವು, ಸೋಲುಗಳನ್ನು ಮಾತ್ರ ನೋಡುತ್ತಿರುತ್ತೇವೆ. ಆದರೆ ಅದರ ಹಿಂದೆ ಇರುವ ಅವನ ಬದುಕಿರುತ್ತದೆ. ಆ ಬದುಕಿನಲ್ಲಿ ಒಂದಿಷ್ಟು ಕಷ್ಟ, ಪರಿಶ್ರಮ, ಸಂತೋಷ, ಸಂತಾಪಗಳಿರುತ್ತವೆ. ಸಂಬಂಧ, ಕುಟುಂಬ ಎಲ್ಲವೂ ಇರುತ್ತದೆ.

ಭಾರತದಲ್ಲಿ ಬಾಕ್ಸಿಂಗ್ ಅಷ್ಟೊಂದು ಜನಪ್ರಿಯ ಅಲ್ಲ. ಹೀಗೆ ಜನಪ್ರಿಯ ಅಲ್ಲದ ಕ್ರೀಡೆಗೆ ಒಂದಿಷ್ಟು ಜನ ಎಷ್ಟು ಪರಿಶ್ರಮ ವಹಿಸುತ್ತಾರೆ ಎಂಬುದೇ ಈ ಚಿತ್ರದ ಕಥೆ. ಯಾಕೆಂದರೆ ಜನಪ್ರಿಯ ಅಲ್ಲದ ಕ್ರೀಡೆಗೆ ಹೆಚ್ಚು ಸೌಲಭ್ಯಗಳಿರುವುದಿಲ್ಲ. ಪ್ರಾಯೋಜಕರು ಸಿಗುವುದಿಲ್ಲ. ಹಣ ಇರುವುದಿಲ್ಲ. ತರಬೇತಿ ಸಿಗುವುದಿಲ್ಲ. ಅದಕ್ಕಾಗಿಯೇ ಸಮಯ ಮೀಸಲಿಡಬೇಕು. ಇಷ್ಟೆಲ್ಲ ಮಾಡಿದರೂ ಅವರಿಗೆ ಹಣ ಸಿಗುತ್ತದೆ ಎಂದು ಹೇಳಲಿಕ್ಕಾಗುವುದಿಲ್ಲ. ಹೀಗೆಲ್ಲ ಇದ್ದೂ ಒಂದಿಷ್ಟು ಜನ ಆ ಕ್ರೀಡೆಗಳಿಗೇ ತಮ್ಮ ಜೀವನವನ್ನೇ ಮೀಸಲಿಡುತ್ತಾರಲ್ಲಾ... ಅಂಥವರ ಬದುಕನ್ನು ಕಾಣಿಸುವ ಕಥೆ ಇದು. ಈ ಪಾತ್ರಕ್ಕಾಗಿ ನಾನು ನಾಲ್ಕು ತಿಂಗಳ ಬಾಕ್ಸಿಂಗ್ ತರಬೇತಿ ಪಡೆದಿದ್ದೇನೆ. ತುಂಬ ರಿಯಲಿಸ್ಟಿಕ್ ಆಗಿ, ರಾ ಫೀಲ್ ಬರುವ ಹಾಗೆ ಚಿತ್ರವನ್ನು ರೂಪಿಸುತ್ತಿದ್ದೇವೆ.

◆ **ನಿಮ್ಮ ತಮ್ಮ ಯುವರಾಜ್ ಕುಮಾರ್ ಸಿನಿಮಾ ಮಾಡುತ್ತಿದ್ದಾರೆ. ಅವರ ಬಗ್ಗೆ ಏನು ಹೇಳಲು ಇಷ್ಟಪಡ್ತೀರಿ?**

ಖುಷಿಯಾಗುತ್ತದೆ ಅವನನ್ನು ನೋಡಿದರೆ. ಯಾಕೆಂದರೆ ಅವನು ಕಳೆದ ಕೆಲವು ವರ್ಷಗಳಲ್ಲಿ ಸಾಕಷ್ಟು ತರಬೇತಿ ಪಡೆದುಕೊಂಡಿದ್ದಾನೆ. ತರಬೇತಿಗೋಸ್ಕರವೇ ಮುಂಬೈಗೂ ಹೋಗಿ ಬಂದಿದ್ದಾನೆ. ಬರಿ ನಟನೆಯಷ್ಟೇ ಅಲ್ಲ, ದೇಹದಾರ್ಢ್ಯ, ನೃತ್ಯ, ಫೈಟ್ ಎಲ್ಲ ರೀತಿಯ ತರಬೇತಿ ಪಡೆದುಕೊಂಡಿದ್ದಾನೆ. ಅವನ ಶ್ರದ್ಧೆ, ಮಹತ್ವಾಕಾಂಕ್ಷೆ ನೋಡಿದ್ರೆ ಖುಷಿಯಾಗುತ್ತದೆ. ■



# ರಶ್ಮಿಕಾ ಕುತೂಹಲ

ಜನಪ್ರಿಯತೆಯಲ್ಲಿಯೂ, ಸೋಷಿಯಲ್ ಮೀಡಿಯಾದಲ್ಲಿ ಟ್ರೋಲ್ ಆಗುವುದರಲ್ಲಿಯೂ ರಶ್ಮಿಕಾ ಮಂದಣ್ಣ ಅವರನ್ನು ಸರಿಗಟ್ಟುವವರು ಇಲ್ಲ. ಕನ್ನಡದಿಂದ ಹೋಗಿ ತೆಲುಗಿನಲ್ಲಿ ಮಿರಮಿರ ಮಿಂಚುತ್ತಿರುವ ಈ ನಟಿಯ ಮನೆಯ ಮೇಲೆ ಕೆಲವು ಕಾಲದ ಹಿಂದೆ ಐಟಿ ದಾಳಿಯೂ ಆಗಿತ್ತು. ಆದರೆ ಅದೇನೂ ಅವರನ್ನು ಧೃತಿಗೆಡಿಸಲಿಲ್ಲ. ಈಗಲೂ ರಶ್ಮಿಕಾ ಕನ್ನಡಿಗರ ಕೈಗೆ ಸುಲಭಕ್ಕೆ ಎಟುಕದಷ್ಟು ತೆಲುಗಿನಲ್ಲಿ ಬ್ಯುಸಿಯಾಗಿದ್ದಾರೆ. ಆದರೆ ಸೋಷಿಯಲ್ ಮೀಡಿಯಾ ಟ್ರೋಲ್‌ಗಳ ಬಾಯಿಗೆ ಮಾತ್ರ ಪುರಸೊತ್ತು ಮಾಡಿಕೊಂಡು ಆಗಾಗ ಆಹಾರ ಒದಗಿಸುತ್ತಲೇ ಇರುತ್ತಾರೆ.

ಇತ್ತೀಚೆಗೆ ಅವರ ಸಂದರ್ಶನವೊಂದು ಟಿಕ್‌ಟಾಕ್ ಪ್ರತಿಭೆಗಳ ಪಾಲಿಗೆ ಹಬ್ಬದೂಟ ಉಣಿಸಿತ್ತು. ಅವರ ಒಂದೊಂದು ಮಾತುಗಳನ್ನು ಟಿಕ್‌ಟಾಕ್ ಮಾಡಿ ಉಡಾಯಿಸಿದ್ದರು.

ಲಾಕ್‌ಡೌನ್ ಕಾಲ ಮುಗಿದು ಈಗ ಚಿತ್ರರಂಗ ಮರಳಿ ಚಟುವಟಿಯತ್ತ ತಿರುಗುವ ಸನ್ನಾಹದಲ್ಲಿದೆ. ರಶ್ಮಿಕಾ ಕೂಡ ತಮ್ಮ ವೃತ್ತಿಜೀವನದ ಕುರಿತು ಗಂಭೀರವಾಗಿ ಚಿಂತಿಸುತ್ತಿರುವ ಹಾಗಿದೆ. ಹಾಗಾಗಿಯೇ ಅವರು ಇತ್ತೀಚೆಗೆ ತಮ್ಮ ಟ್ವಿಟರ್ ಖಾತೆಯಲ್ಲಿ ಅಭಿಮಾನಿಗಳನ್ನು ಉದ್ದೇಶಿಸಿ, 'ಮುಂದಿನ ದಿನಗಳಲ್ಲಿ ನನ್ನನ್ನು ಯಾವ ರೀತಿಯ ಸಿನಿಮಾ ಮತ್ತು ಪಾತ್ರಗಳಲ್ಲಿ ನೋಡಲು ಇಷ್ಟಪಡ್ತೀರಿ? ಒಂದಿಷ್ಟು ರೆಫರೆನ್ಸ್‌ಗಳನ್ನು ಕೊಡಿ. ನಾನು ನಿಮ್ಮ ಸ್ಪಂದನ ತಿಳಿಯಲು ಕಾತರಳಾಗಿದ್ದೇನೆ' ಎಂದು ಬರೆದುಕೊಂಡಿದ್ದರು.

ರಶ್ಮಿಕಾ ಈ ಬೇಡಿಕೆಗೆ ಭರಪೂರ ಸಲಹೆಗಳೂ ಬಂದಿದೆ. ನಿರ್ದೇಶಕ ಸುನಿ ಅವರಂತೂ ಇಂಗ್ಲಿಷ್ ಸಿನಿಮಾವೊಂದರ ಸೂಪರ್ ವುಮೆನ್ ಚಿತ್ರ ಹಾಕಿ ಪ್ರತಿಕ್ರಿಯಿಸಿದ್ದಾರೆ. ರಶ್ಮಿಕಾ ಕೂಡ ಅದಕ್ಕೆ, 'ಖಂಡಿತ. ಇಂಥ ಪಾತ್ರವನ್ನೂ ಮಾಡೇ ಮಾಡ್ತೀನಿ' ಎಂದು ಪ್ರತಿಕ್ರಿಯಿಸಿದ್ದಾರೆ.

ಅಭಿಮಾನಿಗಳಿಂದ ಸಲಹೆ ಪಡೆದ ಅವರು ಎಂಥ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಷ್ಟೆ. ■